ಯುಗಾದಿ ವಿಶೇಷಾಂಕ 2026

ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ

# ಲ್ಯಾಪ್‌ಟಾಪ್ ಖರೀದಿಸಿದ ಫಜೀತಿ

■ ಪಾಪುಗುರು ದಾವಣಗೆರೆ

ಕಲೆ: ಅಭಿಷೇಕ್ ಹಳೇಮನಿ

ಲ್ಯಾಪ್‌ಟಾಪ್ ಅನ್ನೋದು ಇವತ್ತು ಕೇವಲ ಒಂದು ಯಂತ್ರವಲ್ಲ. ಅದು ಮನೆಯಲ್ಲಿ ಕಾಲಿಟ್ಟ ಕ್ಷಣದಿಂದಲೇ ಒಂದು ಸಾಮಾಜಿಕ ಸಮಸ್ಯೆ, ಒಂದು ಕುಟುಂಬೀಯ ವಿಚಾರ, ಮತ್ತು ಕೆಲವೊಮ್ಮೆ ಒಂದು ಮಾನಸಿಕ ಪರೀಕ್ಷೆಯೂ ಆಗಿಬಿಡುತ್ತದೆ. ನನಗೆ ಲ್ಯಾಪ್‌ಟಾಪ್ ಬೇಕು ಅನ್ನೋ ಆಸೆ ಧುತ್ತನೇ ಎದ್ದು ಬಂದದ್ದಲ್ಲ. ಅದು ನಿಧಾನವಾಗಿ ಬೆಳೆದ ಆಸೆ. ಮೊಬೈಲ್‌ನಲ್ಲಿ ಕೆಲಸ ಮಾಡ್ತಾ ಸ್ಕ್ರೀನ್ ಚಿಕ್ಕದಾಗುತ್ತಾ ಹೋದಂತಿತ್ತು, ಅಕ್ಷರಗಳು ಕಣ್ಣಿಂದ ಓಡುತ್ತಾ ಇದ್ದವು, ಬೆರಳುಗಳು ನಿನಗೆ ವಿಶ್ರಾಂತಿ ಬೇಕು ಅಂತ ಹೇಳೋ ಹಂತಕ್ಕೆ ಬಂದಿದ್ದವು. ಮೊಬೈಲ್‌ನಲ್ಲಿ ಕೆಲಸ ಮಾಡೋದು ಅಂದ್ರೆ ಮನೆ ಮುಂದೆ ನಿಂತು ಒಳಗೆ ಏನಿದೆ ಅಂತ ಕಿಟಕಿಯಿಂದಲೇ ನೋಡೋ ಹಾಗೆ ನೋಡಬಹುದು, ಆದ್ರೆ ಒಳಗೆ ಹೋಗಲು ಆಗಲ್ಲ. ಹೀಗಾಗಿ ಒಂದು ದಿನ ಮನಸ್ಸು ತೀರ್ಮಾನಿಸಿತು, ಅದೆಂದರೆ ಲ್ಯಾಪ್‌ಟಾಪ್.

ಆದ್ರೆ ಮನಸ್ಸಿನ ತೀರ್ಮಾನ ಮನೆಯ ತೀರ್ಮಾನ ಆಗೋದು ಅಷ್ಟು ಸುಲಭ ಅಲ್ಲ. ಒಂದು ಸಂಜೆ, ಎಲ್ಲರೂ ಟೀವಿ ಮುಂದೆ ಕೂತಿದ್ದಾಗ ನಾನು ಶಾಂತವಾಗಿ ಹೇಳಿದೆ ನನಗೆ ಲ್ಯಾಪ್‌ಟಾಪ್ ಬೇಕು. ನಾನು ಹೇಳಿದ್ದು ಒಂದು ವಾಕ್ಯ. ಆದ್ರೆ ಅದು ಮನೆಲಿ ಗ್ರಾಮ ಪಂಚಾಯಿತಿ ಸಭೆಯಾಗಿ ಬದಲಾಯ್ತು. ಅಪ್ಪ ಮೊದಲೇ ಪ್ರಶ್ನೆಗಳ ಸುರಿಮಳೆ ಸುರಿಸಿದರು. ಏಕೆ ಬೇಕು? ಓದಕ್ಕೆನಾ? ಇಲ್ಲಾ ಓದಿಲ್ಲ ಅನ್ನೋದಕ್ಕೆ ಕಾರಣ ಬೇಕಾ? ಅಪ್ಪನ ಪ್ರತಿಯೊಂದು ಪ್ರಶ್ನೆಯಲ್ಲೂ ಒಂದು ಅನುಭವದ ಛಾಯೆ ಇತ್ತು. ಅಮ್ಮ ತಕ್ಷಣ ಉಪಯೋಗದ ಕಡೆ ನೋಡಿದರು. ಇದ್ರಲ್ಲಿ ಅಡುಗೆ ವಿಡಿಯೊ ಬರಬೇಕು. ಹಳೆ ಪಾತ್ರೆ ಬಳಸೋ ವಿಡಿಯೊಗಳು ಇರಬೇಕು. ಬರಲಿಲ್ಲ ಅಂದ್ರೆ ನಿನಗೇ ಬೇಡ ಅನ್ನಿಸಬಹುದು, ನನಗೆ ಬೇಡ. ಅಕ್ಕ ಮಾತ್ರ ಹಣಕಾಸು ಸಚಿವಳಂತೆ ಕೂತಿದ್ದಳು. ಲ್ಯಾಪ್‌ಟಾಪ್ ಅಂದ್ರೆ ವೈಫೈ ಬೇಕು, ವೈಫೈ ಅಂದ್ರೆ ರಿಚಾರ್ಜ್, ರಿಚಾರ್ಜ್ ಅಂದ್ರೆ ಖರ್ಚು. ಈ ಲೆಕ್ಕಾಚಾರ ನೋಡಿದ್ದಿಯಾ?

ನಾನು ಮಧ್ಯೆ ಮಧ್ಯೆ ಭವಿಷ್ಯ, ಕೆಲಸ, ಪ್ರಗತಿ, ಕೌಶಲ್ಯ ಅಭಿವೃದ್ಧಿ ಅಂತ

